OS 163/14

ಡಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 23-08-2022**

ಪಾಟೀ ಸವಾಲು ಃ ವಾದಿ ಪರಃ ಶ್ರೀ ಎಮ್ ಕೆ ವಿ ಕೆ ವಕೀಲರಿಂದಃ

ಈ ವ್ಯಾಜದ ವಾದಿಯ ಪರಿಚಯ ಇಲ್ಲ. ವಾದಿ ಪರವಾಗಿ ಸಾಕ್ಷಿ ನುಡಿದ ಪಿಡಬ್ಲೂ-1 ರವರ ಪರಿಚಯ ಕೂಡ ಇಲ್ಲ. ಫ಼ೆಡ್ರಿಕ್ ಡಿಸೋಜರವರ ತಂದೆಯ ಪರಿಚಯ ಕೂಡ ನನಗೆ ಇಲ್ಲ. ವಾದಿಯ ಆಸ್ತಿ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯ ಆಸ್ತಿಯ ಸರ್ವೇ ನಂ. ಮತ್ತು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ವಾದಿಯ ಆಸ್ತಿಯ ಗಡಿ ನನಗೆ ಗೊತ್ತಿಲ್ಲ. ನನಗೆ ಕದಿಂ ವರ್ಗ, ಸ್ಥಳ, ಕುಂಕಿ ಸ್ಥಳ ಎಂದರೆ ಏನು ಎಂದು ಗೊತ್ತಿರುವುದಿಲ್ಲ. ತುಂಗು ಹೆಂಗಸು ಎಂದರೆ ನನ್ನ ತಾಯಿಯ ತಾಯಿ. ಬಾಬು ದೇವಾಡಿಗ ನನ್ನ ಅಜ್ಜಿಯ ಗಂಡ. ನಾನು ಹುಟ್ಟಿದ್ದು ನನ್ನ ಅಜ್ಜಿಯ ಮನೆಯಲ್ಲಿ. ನನ್ನ ಅಜ್ಜಿಯ ಮನೆ ಮತ್ತು ಆಸ್ತಿ ಇರುವುದು ವ್ಯಾಜ್ಯದ ಆಸ್ತಿಯಿಂದ ದೂರದಲ್ಲಿ ವ್ಯಾಜ್ಯದ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಇದೆ. ನನ್ನ ಅಜ್ಜಿಯ ಆಸ್ತಿಯಲ್ಲಿ ಸ್ವಲ್ಪ ಗದ್ದೆ ಇದೆ. ಈ ವ್ಯಾಜ್ಯದ ಜಾಗದಲ್ಲಿ ಇರುವ ನನ್ನ ಮನೆಯಿಂದ ನನ್ನ ಅಜ್ಜಿಯ ಮನೆಯ ಮಧ್ಯದಲ್ಲಿ ಮುದು ಶೆಟ್ಟಿ ಎಂಬುವವರ ಆಸ್ತಿ ಇದೆ. ಮುದ್ದು ಶೆಟ್ಟಿಯವರ ಆಸ್ತಿ ಎಷ್ಟು ವಿಸ್ತೀರ್ಣ ಎಂಬುದು ನನಗೆ ಅಂದಾಜು ಇಲ್ಲ. ಮುದು ಶೆಟ್ಟಿಯವರ ಆಸ್ತಿಯಲ್ಲಿ ಗದ್ದೆಗಳು ಇವೆ. ನನ್ನ ಅಜ್ಜಿಯ ಆಸ್ತಿಗೆ ಎಷ್ಟು ವೀಸ್ತಿರ್ಣದ ಕುಂಕಿ ಜಾಗ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಮುದು ಶೆಟ್ಟಿಯವರ ಆಸ್ತಿಯಲ್ಲಿ ಎಷ್ಟು ವೀಸಿರ್ಣದ ಕುಂಕಿ ಜಾಗ ಇದೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಮತ್ತು ಅವರ ತಂದೆಗೆ ಅವರಿಗೆ ಎಷ್ಟು ವೀಸ್ತಿರ್ಣದ ಮತ್ತು ಎಲ್ಲಿಯವರೆಗೂ ಕುಂಕಿ ಜಾಗ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣನ ಹೆಸರು ಬೊಗ್ಗು ದೇವಾಡಿಗ. ನಾನು ದಾವಾ ಆಸ್ತಿಯಲ್ಲಿ ಮನೆ ಕಟ್ಟಿ 20 ವರ್ಷ ಆಯಿತು. ನಾವು ಮನೆ ಕಟ್ಟುವಾಗ ನಿಟ್ಟೆ ಪಂಚಾಯತಿಯಿಂದ ಲೈಸ್ಷೆಸ್ ಪಡೆದೆ ಕಟ್ಟಿರುತ್ತೇನೆ. ಆ ಲೈಸೆನ್ಸ ಅಲ್ಲಿ ನಾನು ಯಾವಾಗ ಮನೆ ಕಟ್ಟಿರುತ್ತೇನೆ

ಎಂದು ತಿಳಿಯುತ್ತದೆ. ನಾನು ಮನೆ ಕಟ್ಟಿದ ಲಗಾಯತು ಪ್ರತಿ ವರ್ಷ ನಾನು ಮನೆ ತೆರಿಗೆ ಕಟ್ಟಿ ರಶೀದಿ ಪಡೆದಿರುತ್ತೇನೆ. ಆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಪ್ರಥಮವಾಗಿ ಕಟ್ಟಿದ ಮನೆ ತೆರಿಗೆ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ಓದಲು ಬರುವುದಿಲ್ಲ. ನನ್ನ ಗಂಡನ ಹೆಸರು ವಸಂತ ದೇವಾಡಿಗ. ನನ್ನ ಅಜ್ಜಿಯ ಮನೆಯ ಒಠಾರದ ಹೆಸರು ಕುಕ್ಕಬೆ. ನಾನು ವ್ಯಾಜ್ಯದ ಜಾಗದಲಿ ಮನೆ ಕಟ್ಟುವ ಮೊದಲು ನಾನು  ಕುಕ್ಕಬೆ ಯಲ್ಲಿ ಇದ್ದೇನು. ನನ್ನ ಗಂಡ ಮತ್ತು ಮಕ್ಕಳು ನನ್ನ ಅಜ್ಜಿಯ ಮನೆ ಕುಕ್ಕಬೆಯಲ್ಲಿ ಇದ್ದೆವು.  ಈ ಆಸ್ತಿಯಲ್ಲಿ ಮನೆ ಕಟ್ಟುವ ಮುಂಚೆ ಒಂದು ತಾತ್ಕಾಲಿಕ ಶೆಡು ಕಟ್ಟಿದೆ ಎಂದರೆ ಸರಿಯಲ್ಲ. ನಾನು ಈ ಜಾಗದಲ್ಲಿ ಮನೆ ಕಟ್ಟಲು ಶುರುಮಾಡಿದಾಗ ವಾದಿ ಮತ್ತು ಅವರ ಸಹೋದರರು ಅದಕ್ಕೆ ಆಕ್ಷೇಪ ಮಾಡಿರುತ್ತಾರೆ ಎಂದರೆ ಸರಿಯಲ್ಲ.  ಆದರೆ ತಹಶೀಲ್ದಾರರಿಗೆ ಅವರ ಜಾಗದಲ್ಲಿ ನಾವು ಪ್ರವೇಶ ಮಾಡಿರುತ್ತೇವೆ ಎಂದು ದೂರು ನೀಡಿದ್ದರು. ಅದರೆ ಕುಂಕಿ ಜಾಗ ಎಂದು ದೂರು ನೀಡಿದ್ದರು ಮತ್ತು ಆಕ್ಷೇಪ ಮಾಡಿದ್ದರು ಆದರೆ ಅದು ಸರ್ಕಾರಿ ಜಾಗೆ ಇದ್ದು ತುಂಬಾ ಜನ ಮನೆ ಕಟ್ಟಿರುತ್ತಾರೆ. ಹಾಗೇ ಬೇರೆಯವರು ಮನೆ ಕಟ್ಟಿದು ಯಾವ ಸರ್ವೇ ನಂ. ನಲ್ಲಿದೆ ಮತ್ತು ಯಾರ ಕುಂಕಿ ಜಾಗದಲ್ಲಿ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು 20 ವರ್ಷದ ಹಿಂದೆ ಮನೆ ಕಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ  ಸರಿಯಲ್ಲ. ನಾನು ಈ ದಾವೆ ದಾಖಲಾಗುವ ಸ್ವಲ್ಪ ವರ್ಷದ ಹಿಂದೆ ಮನೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು 20 ವರ್ಷಗಳ ಹಿಂದೆ ಮನೆ ಕಟಟಿದ್ದೇನೆ ಎಂದು ಹೇಳಲು ದಾಖಲೆ ಇದೆ. ನಾನು ಮನೆ ಕಟ್ಟಿದ ಕೂಡಲೇ ಮನೆಗೆ ಪಂಚಾಯತ್ ಇಂದ ನಂಬರ್ ಅನ್ನು ಕೊಟ್ಟಿರುತ್ತಾರೆ. ನಮ್ಮ ರೇಷನ್ ಕಾರ್ಡ್ ಮತ್ತು ಓಟರ್ ಕಾರ್ಡ್ ಮತ್ತು ಆಧಾರ್ ಕಾರ್ಡ ನಲ್ಲಿ ನಾವು ಮನೆ ಕಟ್ಟಿದ ನಂತರದಿಂದ ಈ ಮನೆಯ ನಂಬರ್ ಮತ್ತು ವಿಳಾಸದಲ್ಲಿ ಯೇ ಇದೆ. ಅದಕ್ಕಿಂತ ಪೂರ್ವದಲ್ಲಿ ಕುಕ್ಕಬೆ ವಿಳಾಸದಲ್ಲಿ ಇವೆ. ನಾನು ಮನೆ ಕಟ್ಟಿದ ಕೂಡಲೇ ವಾದಿಯ ಕಡೆಯಿಂದ ಕೊಟ್ಟ ದೂರಿನ ಅನುಸಾರವಾಗಿ ತಹಶೀಲ್ದಾರರು ನನ್ನ  ಮೇಲೆ ಸಿಸಿ ನಂ. 508/11 ನಿಪಿ-11 ರಂತೆ ಪ್ರಕರಣದ ದಾಖಲಿಸಿದ್ದರು  ಎಂದರೆ ಸರಿ. ಅದಕ್ಕೆ ಸರಿಯಾದ ಸಾಕ್ಷಿ ಸಿಗದೇ ಆ ಕೇಸು ಬಿದ್ದು ಹೋಯಿತು ಎಂದರೆ ಸರಿ. ನಾನು ಕುಂಕಿ

ಜಾಗವನ್ನು ಅತಿಕ್ರಮಣ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ವ್ಯಾಜ್ಯದಲ್ಲಿ ನ್ಯಾಯಾಲಯದಿಂದ ಸರ್ವೇ ಅಳತೆ ಮಾಡಿಸಲು ವಾದಿಯ ಕುಂಕಿ ಜಾಗದಲ್ಲಿ ಇದೆಯೋ ಇಲ್ಲವೋ ಎಂದು ಅಳತೆ ಮಾಡಿಸಲು ನನ್ನ ಆಕ್ಷೇಪಣೆ ಇಲ್ಲ. ನಮ್ಮೊಳಗಿರುವ ವಿವಾದ ಈ ವ್ಯಾಜ್ಯದ ಆಸ್ತಿಯಲ್ಲಿರುವ ಮನೆಯು ವಾದಿಯ ಕುಂಕಿ ಜಾಗದಲ್ಲಿ ಇದೆ ಎಂದು ವಾದಿಯರು ವಾದ ಮತ್ತು ಅದು ವಾದಿಯರ ಕುಂಕಿ ಜಾಗದಲ್ಲಿಇರುವುದಿಲ್ಲ ಎಂಬುದು ನನ್ನ ವಾದ ಆಗಿರುತ್ತದೆ. ಸಾಕ್ಷಿಯು ಮುಂದುವರಿದು ಸದರಿ ನನ್ನ ಮನೆಯು ವಾದಿಯರ ಆಸ್ತಿಯಿಂದ ಬಹಳ ದೂರದಲ್ಲಿ ಇದೆ. ಬೇರೆಯವರ ಮನೆ ವಾದಿಯರ ಕುಂಕಿ ಜಾಗದಿಂದ ಹೊರಗೆ ಇದೆ ಆ ಕಾರಣದಿಂದ ಅವರ ಮೇಲೆ ದಾವೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಇರುವ ಜಾಗ ಸರ್ಕಾರಿ ಆಗಿದ್ದು ಸದರಿ ಜಾಗವನ್ನು ದರ್ಖಾಸು ಮಾಡಿ ಕೊಡಬೇಕೆಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ಇಲ್ಲಿಯವರೆಗೆ ಅದು ಮಂಜೂರಾಗಿರುವುದಿಲ್ಲ. ವಾದಿಯರು ತಮ್ಮ ಕುಂಕಿ ಜಾಗ ದರ್ಖಾಸು ಮಾಡಲು ಬರುವುದಿಲ್ಲ ಎಂದು ಆಕ್ಷೇಪ ಹಾಕಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಅರ್ಜಿ ಮಂಜೂರು ಮಾಡುವ ಬಗ್ಗೆ ಅದು ಕುಂಕಿ ಸ್ಥಳ ಹೌದು ಅಲ್ಲ ಎಂದು ಅಳತೆ ಮಾಡಿಸಿ ನಕ್ಷೆ ತಯಾರಿಸಿರುವುದಿಲ್ಲ. ನನ್ನ ಮೇಲೆ ಮಾಡಿದ ಕೇಸು ಬಿಡುಗಡೆಯಾಗಿದ್ದು ಯಾವ ಕಾರಣಕ್ಕಾಗಿ ಬಿಡುಗಡೆಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಜಾಗವನ್ನು ಸರ್ವೇ ಮುಖಾಂತರ ಅಳತೆ ಮಾಡಿಸಿದರೆ ಅದು ಕುಂಕಿ ಜಾಗದಲ್ಲಿ ಇದೆಯೋ ಇಲ್ಲವೊ್ೀ ಎಂಬ ಬಗ್ಗೆ ಗೊತ್ತಾಗುತ್ತದೆ. ಈ ವ್ಯಾಜ್ಯ ಮಾಡುವ ಪೂರ್ವದಲ್ಲಿ ಮತ್ತು ಮನೆ ಕಟ್ಟುವ ಪೂರ್ವದಲ್ಲಿ ತುಂಬಾ ಸಲ ಈ ಜಾಗದಲ್ಲಿ ಅಳತೆ ಮಾಡಿಸಬೇಕೆಂದು ವಾದಿಯರು ಹೇಳಿದ್ದಾರೆ ಅದಕ್ಕೆ ನಾನು ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮನೆ ಕಟ್ಟಿದ ಜಾಗಕ್ಕೆ ಯಾವ ದಿಕ್ಕಿನಲ್ಲಿ ವಾದಿಯರ ವರ್ಗ ಸ್ಥಳ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯರ ಕೃಷಿ ಜಾಗ ಯಾವ ದಿಕ್ಕಿನಲ್ಲಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯರಿಗೆ ತುಂಬಾ ವಿಸ್ತೀರ್ಣದ ಭತ್ತದ ಗದ್ದೆಗಳು ಅಡಿಕೆ ಮತ್ತು ತೆಂಗಿನ ತೋಟಗಳು ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅವರ ಕೃಷಿ ಭೂಮಿಗೆ ಇದೇ ಸ್ಥಳದಿಂದ ತರಗೆಲೆ ಮತ್ತು ಕೃಷಿಗೆ ಬೇಕಾದ ಕಟ್ಟಿಗೆ ಮತ್ತು ಜಾನುವಾರುಗಳನ್ನು ಮೇಯಿಸಲು ವಾದಿಯರು

ಉಪಯೋಗಿಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಪಂಚಾಯತ್ ರವರಿಗೆ ವಾದಿಯರ ಕುಂಕಿ ಜಾಗ ಅಥವಾ ಸರ್ಕಾರಿ ಜಾಗ ಎಂದು ತಿಳಿಸದೇ ಪಂಚಾಯತ್ ರವರಿಂದ ಮನೆ ನಂಬರ್ ಪಡೆದುಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಮನೆ ಕಟ್ಟಲು ಲೈಸೆನ್ಸ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ